■ ಹನಿ

## ಕುರ್ಚಿಗೂ ಸಿಮೆಂಟ್!

ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ಮಂಡಳಿಯಾದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧ್ಯಕ್ಷ ಎನ್. ಶ್ರೀನಿವಾಸನ್ ಕೊನೆಗೂ ಸುಪ್ರೀಂಕೋರ್ಟಿನಿಂದ ಛೀ ಅನ್ನಿಸಿಕೊಂಡು ಹೊರಬಿದ್ದಿದ್ದಾರೆ. ವಾರದ ಹಿಂದೆಯೇ ಸುಪ್ರೀಂಕೋರ್ಟಿನ ನ್ಯಾಯಾಧೀಶರು ಸೂಚ್ಯವಾಗಿ ಶ್ರೀನಿವಾಸನ್‌ರ ವಕೀಲರಿಗೆ 'ಸ್ವಯಂಪ್ರೇರಿತರಾಗಿ ರಾಜೀನಾಮೆ ಕೊಡಲಿ' ಎಂದು ಸೂಚಿಸಿದ್ದರು. ಆದರೆ ಅಧಿಕಾರ ಬಿಟ್ಟುಕೊಡಲು ಸಿದ್ಧರಿಲ್ಲದ ಶ್ರೀನಿವಾಸನ್, ಕುರ್ಚಿಗೆ ಸಿಮೆಂಟ್ ಹಾಕಿಕೊಂಡು ಕುಳಿತಿದ್ದರು. ಹೇಳಿ ಕೇಳಿ ಅವರದ್ದು ಇಂಡಿಯಾ ಸಿಮೆಂಟ್ಸ್ ಕಂಪೆನಿ. ಶ್ರೀನಿವಾಸನ್ ಈಗ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಅದೇ ಇಂಡಿಯಾ ಸಿಮೆಂಟ್ಸ್ ಕಂಪೆನಿಯಲ್ಲಿ ಅವರ ತಂದೆ ಒಬ್ಬ ನೌಕರರಾಗಿದ್ದರು. ಅಪ್ಪ ನೌಕರನಾಗಿದ್ದ ಕಂಪೆನಿಯಲ್ಲಿ ಮಗ ಎಂ.ಡಿ ಆಗಬಾರದು ಎಂದೇನಿಲ್ಲ. ಉದ್ಯಮ ರಂಗದಲ್ಲಿ ಶ್ರೀನಿವಾಸ್ ತೋರಿಸಿದ ಬುದ್ಧಿವಂತಿಕೆ ಮತ್ತು ಶ್ರಮವೂ ಅದಕ್ಕೆ ಕಾರಣವಾಗಿರಬಹುದು. ಆದರೆ ಕ್ರಿಕೆಟ್ ರಂಗದಲ್ಲಿ ಮೇಲೇರಲು ಮಾತ್ರ ಶ್ರೀನಿವಾಸ್ ತೋರಿಸಿದ್ದು ಬುದ್ಧಿವಂತಿಕೆಯಲ್ಲ, ಕುಟಿಲ ನೀತಿ ಎನ್ನುವುದು ಸ್ಪಷ್ಟ.



ತಮಿಳುನಾಡು ರಾಜ್ಯ ಕ್ರಿಕೆಟ್ ಸಂಸ್ಥೆಯ ಆಡಳಿತ ಮಂಡಳಿಗೆ ಶ್ರೀನಿವಾಸನ್ ಪ್ರವೇಶಿಸಲು ಮುಖ್ಯ ಕಾರಣ ಎ.ಸಿ.ಮುತ್ತಯ್ಯ. ಅವರಾಗ ಬಿಸಿಸಿಐ ಅಧ್ಯಕ್ಷರಾಗಿದ್ದರು. ಇಂಡಿಯಾ ಸಿಮೆಂಟ್ಸ್ ಮೂಲಕ ಕ್ಲಬ್ ತಂಡಗಳನ್ನು ಸ್ಪಾನ್ಸರ್ ಮಾಡಿದ ಶ್ರೀನಿವಾಸನ್, ಶರದ್ ಪವಾರ್ ನೆರವಿನೊಂದಿಗೆ ಬಿಸಿಸಿಐಯಲ್ಲಿ ಸ್ಥಾನ ಗಟ್ಟಿ ಮಾಡಿಕೊಂಡರು. ಏಕದಿನ ಕ್ರಿಕೆಟ್ ಶುರುವಾದಾಗಲೇ ಕ್ರಿಕೆಟಿಗರ ಹಣದ ದಾಹದ ಕಳ್ಳದಾರಿಗಳು ಬಹಿರಂಗಗೊಂಡಿದ್ದವು. ಆದರೆ 20 ಟ್ವೆಂಟಿ ಕ್ರಿಕೆಟ್ ಶುರುವಾದ ಬಳಿಕವಂತೂ 'ಕ್ರಿಕೆಟ್ ಎಂದರೆ ಬರೀ ಹಣ' ಎಂಬಂತಹ ವಾತಾವರಣ ನಿರ್ಮಾಣವಾಯಿತು.

2008ರವರೆಗೆ ಬಿಸಿಸಿಐ ಯಲ್ಲಿ ಒಂದು ನಿಯಮವಿತ್ತು. ಬಿಸಿಸಿಐ ಆಡಳಿತದಲ್ಲಿ ಇರುವ ವ್ಯಕ್ತಿಗಳು ಕ್ರಿಕೆಟ್ ತಂಡಗಳ ಮಾಲೀಕತ್ವ ಹೊಂದಬಾರದು ಎನ್ನುವುದು ಆ ನಿಯಮ. ಶ್ರೀನಿವಾಸನ್ ಬಿಸಿಸಿಐ ಪ್ರವೇಶಿಸಿದ ಬಳಿಕ ಆ ನಿಯಮಕ್ಕೆ ತಿದ್ದುಪಡಿ ತರಲಾಯಿತು. 2011ರಲ್ಲಿ ಶ್ರೀನಿವಾಸನ್ ಬಿಸಿಸಿಐ ಅಧ್ಯಕ್ಷರಾದರು. ಅಲ್ಲಿಂದೀಚೆಗೆ ನಡೆದದ್ದು ಬೆಟ್ಟಿಂಗ್ ಮತ್ತು ಫಿಕ್ಸಿಂಗ್ ಕಾರುಬಾರು. ಅಳಿಯ ಗುರುನಾಥ ಮೇಯಪ್ಪನ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ನಾಯಕ ಮಹೇಂದ್ರಸಿಂಗ್ ದೋನಿ ಗಳಸ್ಯ ಕಂಠಸ್ಯ ಗೆಳೆತನಕ್ಕೆ ಹೊಸ ಅರ್ಥಗಳು ಈಗ ಬಹಿರಂಗವಾಗತೊಡಗಿವೆ. ಮ್ಯಾಚ್ ಫಿಕ್ಸಿಂಗ್ ಮತ್ತು ಬೆಟ್ಟಿಂಗ್‌ನಲ್ಲಿ ಸಿಕ್ಕಿಬಿದ್ದಿರುವ ಮೇಯಪ್ಪನ್ ಜೈಲಿನಲ್ಲಿದ್ದಾರೆ. ಮಾವ ಶ್ರೀನಿವಾಸನ್ ಗ್ರಹಗತಿಗಳೂ ಕೈಕೊಡತೊಡಗಿವೆ.

ಜುಲೈನಲ್ಲಿ ಇದೇ ಶ್ರೀನಿವಾಸನ್ ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ) ಚೇರ್‌ಮನ್ ಆಗಿ ಅಧಿಕಾರ ವಹಿಸಿಕೊಳ್ಳುವುದು ಖಚಿತವಾಗಿತ್ತು. ಈಗ ಬಿಸಿಸಿಐ ಕೈತಪ್ಪಿದೆ. ಐಸಿಸಿ ದಕ್ಕುತ್ತಾ ಎನ್ನುವುದು ಗೊತ್ತಿಲ್ಲ. ಕಾನೂನಿನ ಒಳದಾರಿಗಳನ್ನು ತಡಕಾಡುತ್ತಿರುವ ಶ್ರೀನಿ ಸದ್ಯಕ್ಕಂತೂ ಸುದ್ದಿ ಸುಬ್ಬಕ್ಕ!



## ನಂದಿದ ದೀಪ

ಹಿಂದೀ ಚಿತ್ರರಂಗದ ಒಂದು ಕಾಲದ ಮಾಡರ್ನ್ ಲೇಡಿ ನಂದಾ (75) ಬದುಕಿಗೆ ವಿದಾಯ ಹೇಳಿದ್ದಾರೆ. ಈ 'ಗುಮ್‌ನಾಮ್' ಸುಂದರಿ 60–70ರ ದಶಕದಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ಹೆಣ್ಣು– ಈ ಎರಡೂ ರೀತಿಯ ವಿಭಿನ್ನ ಪಾತ್ರಗಳಲ್ಲಿ ನಟಿಸಿ ಪ್ರೇಕ್ಷಕರ ಕಣ್ಮಣಿಯಾದವರು. 1956ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ನಂದಾ ಆರಂಭದಲ್ಲಿ ಪೋಷಕ ಪಾತ್ರಗಳಲ್ಲಿ ನಟಿಸಿದರೂ ಶೀಘ್ರವೇ ಹೀರೋಯಿನ್ ಪಾತ್ರಕ್ಕೆ ಭಡ್ತಿ ಹೊಂದಿದರು. ತೂಫಾನ್ ಔರ್ ದಿಯಾ, ಹಮ್ ದೋನೋ, ತೀನ್ ದೇವಿಯಾಂ, ದಿ ಟ್ರೇನ್, ಬಂಧಿ, ಅಂಗಾರೇ, ಇತ್ತೆಫಾಖ್, ರಾಮ್ ಲಕ್ಷ್ಮಣ್, ಪ್ರಾಯಶ್ಚಿತ್ತ್, ಅಹಿಸ್ತಾ ಅಹಿಸ್ತಾ, ಮಜ್ದೂರ್, ಪ್ರೇಮ್‌ರೋಗ್ ಮುಂತಾಗಿ ಅವರು ನಟಿಸಿ ಹಿಟ್ ಆದ ಚಿತ್ರಗಳ ಪಟ್ಟಿ ಮಾಡಬಹುದು. 'ಚೋಟಿ ಬೆಹೆನ್' ಅವರಿಗೆ ಹೆಚ್ಚು ಹೆಸರು ತಂದುಕೊಟ್ಟ ಸಿನಿಮಾ. 'ಆಂಚಲ್'ನಲ್ಲಿನ ನಟನೆಗಾಗಿ ಶ್ರೇಷ್ಠ ಪೋಷಕ ನಟಿ ಪ್ರಶಸ್ತಿಯನ್ನೂ ಪಡೆದವರು.

ತೆರೆಯ ಮೇಲೆ ಆಧುನಿಕ ಮಹಿಳೆಯ ಪಾತ್ರಗಳನ್ನು ವಯಸ್ಸಿಗೂ ಮೀರಿದ ಪ್ರಬುದ್ಧತೆಯಿಂದ ನಿಭಾಯಿಸಿದ ನಂದಾ, ವೈಯಕ್ತಿಕ ಜೀವನದಲ್ಲಿ ಒಂಟಿಯಾಗಿದ್ದುದೇ ಹೆಚ್ಚು. ಖ್ಯಾತ ನಿರ್ದೇಶಕ ಮನಮೋಹನ್ ದೇಸಾಯಿ ಜತೆ ಸ್ವಲ್ಪ ಕಾಲ ಜೀವಿಸಿದ್ದ ಆಕೆ 94ರಲ್ಲಿ ದೇಸಾಯಿ ತೀರಿಕೊಂಡ ಬಳಿಕ ಇನ್ನಷ್ಟು ಒಂಟಿಯಾದರು. ಮರಾಠಿ ಚಿತ್ರ ನಟ, ನಿರ್ದೇಶಕ ಮಾಸ್ಟರ್ ವಿನಾಯಕ್ ಮಗಳು ಅಥವಾ ಖ್ಯಾತ ನಿರ್ದೇಶಕ ವಿ.ಶಾಂತಾರಾಮ್ ಸೊಸೆ ಎನ್ನುವ ಅಭಿದಾನಗಳನ್ನೇ ನೆಚ್ಚಿಕೊಳ್ಳದೆ ಸ್ವಂತ ಅಭಿನಯ ಪ್ರತಿಭೆಯಿಂದ ಹೆಸರು ಮಾಡಿದವರು ನಂದಾ. ಅವರ ಕಣ್ಮರೆಯಿಂದ ಬಾಲಿವುಡ್ ಹಳೇಕಾಲದ ಕೊಂಡಿಯೊಂದು ಕಳಚಿದಂತಾಗಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65